**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**ಸಿ. ಸಿ. ನಂ.717/2022**

**ಪಿರ್ಯಾಧಿದಾರರುಃ** ಶ್ರೀ ಎ ಆರ್ ಶ್ರೀನಿವಾಸ ಬಿನ್ ರಂಗೇ ನಾಯ್ಕ, 71 ವರ್ಷ, ವ್ಯವಸಾಯ, ವಾಸ ಅಮ್ಮಡಿ, ಕೊಪ್ಪ ತಾಲ್ಲೂಕು.

**-ವಿರುದ್ಧ -**

**ಆರೋಪಿಃ** ಶ್ರೀ ಹೆಚ್ ಎನ್ ಸುಮಂತ್ ಬಿನ್ ಲೇಟ್ ಹೆಚ್ ಎಸ್ ನಾಗಪ್ಪ ನಾಯ್ಕ, 41 ವರ್ಷ, ಮುಖ್ಯ ರಸ್ತೆ, ಮೇಲಿನಪೇಟೆ, ಕೊಪ್ಪ ತಾಲ್ಲೂಕು ಮತ್ತು ಕೇರ್ ಅಪ್ ಕಾಲಾಯಿ ಸಾಹೇಬ್ರು, 1 ನೇ ಕ್ರಾಸ್, ಗೋರಿ ರಸ್ತೆ, ಕುವೆಂಪು ನಗರ, ಕೊಪ್ಪ.

**ಆರೋಪಣೆ**

ಆರೋಪಿಯಾದ ನೀವು ನಿಮ್ಮ ತುರ್ತು ಅವಶ್ಯಕತೆಗಾಗಿ ಪಿರ್ಯಾಧಿದಾರರಿಂದ ಪಡೆದುಕೊಂಡ ಕೈ ಸಾಲದ ಹಣವನ್ನು ತೀರುವಳಿ ಮಾಡುವ ಸಲುವಾಗಿ ನೀವು ನಿಮ್ಮ ಬಾಬ್ತು ಅವರಿಗೆ ಚೆಕ್ ನಂ.701581 ದಿನಾಂಕ 31.05.2022 ನ್ನು ನಮೂದಿಸಿದ ಕಾರ್ಪೋರೇಷನ್ ಬ್ಯಾಂಕ್, ತೀರ್ಥಹಳ್ಳಿ ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಅವರು ಸದರಿ ಚೆಕ್ಕನ್ನು ಯುನಿಯನ್ ಬ್ಯಾಂಕ್ ಅಪ್ ಇಂಡಿಯಾ, ಕೊಪ್ಪ ಶಾಖೆಗೆ ಹಾಜರುಪಸಿದಾಗ "**Instrument out dated" on 31.05.2022** ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 23.06.2022 ರಂತೆ ವಕೀಲರ ನೋಟೀಸು ನೀಡಿದ್ದು, ಸದರಿ ನೋಟೀಸು ನಿಮಗೆ ದಿನಾಂಕ 24.06.2022 ರಂದು ನಿಮಗೆ ಜಾರಿಯಾಗಿದ್ದು, ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ ತಿಳಿಯಿತು

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ಸಹಿ/- 28.07.2025.
(ಎಂ.ಎನ್. ನಂದಿನಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಪ್ಪ